
## ಶಸ್ತ್ರಚಿಕಿತ್ಸೆಯ ನಂತರ ಆಗುವ ತೊಂದರೆ ಮತ್ತು ಅಪಾಯಗಳೇನು?

ಶಸ್ತ್ರಚಿಕಿತ್ಸೆಯ ನಂತರ ಒಂದೆರಡು ವಾರದವರೆಗೆ ಕಲೆ ಮತ್ತು ಊತ ಕಂಡುಬರುತ್ತದೆ. ಹಾಗೇ ಕೆಲವು ವಾರಗಳ ಬಳಿಕ ಅವು ಕಡಿಮೆಯಾಗುತ್ತದೆ. ರಕ್ತಸ್ರಾವ ಮತ್ತು ಸೋಂಕು ಕೂಡ ಕಡಿಮೆಯಾಗುತ್ತದೆ. ಅಪರೂಪದ ಪ್ರಕರಣಗಳಲ್ಲಿ ಮತ್ತೆ ಟೋಸಿಸ್ ಕಾಣಿಸಬಹುದು. ಇಂತಹವರಲ್ಲಿ ಮತ್ತೆ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆ. ಶಸ್ತ್ರಚಿಕಿತ್ಸೆಯನ್ನು ಮಾಡಿದ ತಕ್ಷಣ ಕಣ್ಣಿನ ನೀರಿನಾಂಶ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಹೀಗಾದರೆ ಇದನ್ನು ತಡೆಯಲು 1 ತಿಂಗಳುಗಳ ಕಾಲ ಕಣ್ಣಿನ ಔಷಧಿಗಳನ್ನು ಬಳಸಬೇಕಾಗುತ್ತದೆ. ಕಣ್ಣು ಹೆಚ್ಚು ಕೆಂಪಾಗಿದ್ದರೆ, ನೋವು ಕಂಡುಬಂದರೆ ಮತ್ತು ಕಣ್ಣಿನಲ್ಲಿ ನೀರು ತುಂಬಿಕೊಂಡರೆ ತಕ್ಷಣ ನೇತ್ರತಜ್ಞರನ್ನು ಸಂಪರ್ಕಿಸಬೇಕಾಗುತ್ತದೆ.



ಸಾಮಾನ್ಯ ಕಣ್ಣು    ಮೇಲಿನ ಕಣ್ರೆಪ್ಪೆ ಕುಸಿದಿರುವುದು

## ಅಕ್ಯುಲೋಪ್ಲಾಸ್ಟಿ

**ದೂರವಾಣಿ ಸಂಖ್ಯೆ: 91–80–66121496**

ನಮ್ಮ ವೆಬ್‌ಸೈಟ್ ಅನ್ನು ಭೇಟಿ ಮಾಡಲು ಇಲ್ಲಿ ಸ್ಕ್ಯಾನ್ ಮಾಡಿ

ನಮ್ಮ ಶೈಕ್ಷಣಿಕ ವಿಡಿಯೋಗಳನ್ನು ವೀಕ್ಷಿಸಲು ಇಲ್ಲಿ ಸ್ಕ್ಯಾನ್ ಮಾಡಿ


ಎನ್.ಎನ್–1 #121/ಸಿ, ಕಾರ್ಡ್ ರಸ್ತೆ, ರಾಜಾಜಿನಗರ, 1ನೇ 'ಆರ್' ಬ್ಲಾಕ್
ಬೆಂಗಳೂರು–560010, ಭಾರತ
ಟೆಲಿಫೋನ್: +91–80–66121643
Oculoplasty Department +91-80-66121398
Email - infonn1@narayananethralaya.com

ಎನ್.ಎನ್–2 ನಾರಾಯಣ ಹೆಲ್ತ್‌ಸಿಟಿ (ನಾರಾಯಣ ಹೃದಯಾಲಯದ ಆವರಣ)
#258/ಎ, ಬೊಮ್ಮಸಂದ್ರ, ಹೊಸೂರು ರಸ್ತೆ
ಬೆಂಗಳೂರು–560099, ಭಾರತ
ಟೆಲಿಫೋನ್: +91–80–66660655/0658
Email - infonn2@narayananethralaya.com

ಎನ್.ಎನ್–3 #1/1, 1ನೇ ಮುಖ್ಯರಸ್ತೆ, ಡಿಫೆನ್ಸ್ ಕಾಲೋನಿ, 100 ಅಡಿ ರಸ್ತೆ,
ಇಂದಿರಾನಗರ, ಬೆಂಗಳೂರು–560038, ಭಾರತ
ಟೆಲಿಫೋನ್: +91–80–66974000/01/02
Email - infonn3@narayananethralaya.com

ಎನ್.ಎನ್–4 #63, ರಾಯಲ್ ಮೀನಾಕ್ಷಿ ಮಾಲ್ ಪಕ್ಕ, ಬನ್ನೇರುಘಟ್ಟ ರಸ್ತೆ,
ಹುಳಿಮಾವು ಬೆಂಗಳೂರು–560076, ಭಾರತ
ಟೆಲಿಫೋನ್: +91–80–66121618/1619, +91 9035154170
Email - infonn4@narayananethralaya.com

ಎನ್.ಎನ್–5 ಪ್ಲಾಟ್ 3–ಸಿ, 1ನೇ ಹಂತ, ದೊಡ್ಡೇನಕ್ಕುಂಡಿ ಇಂಡಸ್ಟ್ರಿಯಲ್ ಏರಿಯಾ
ಮಹದೇವಪುರ ಪಿ. ಓ., ಸೀತಾರಾಮಪಾಳ್ಯ ಮೆಟ್ರೋ ನಿಲ್ದಾಣದ ಪಕ್ಕ
ಬೆಂಗಳೂರು–560048, ಭಾರತ
ಟೆಲಿಫೋನ್: +91–80–66121658/1659
Email - infonn5@narayananethralaya.in

Nnethralaya    Narayananethralaya
www.narayananethralaya.org


CELEBRATING 40 YEARS IN EYE CARE

NARAYANA NETHRALAYA
your faith shall heal you



# ಟೋಸಿಸ್

ONE OF THE HIGHEST Google Reviews HOSPITAL IN THE WORLD 4.9

THE BEST EYE HOSPITAL IN KARNATAKA RANKED #1 FOR MORE THAN A DECADE

## ಟೋಸಿಸ್ ಎಂದರೇನು?

ಕಣ್ಣಿನ ಮೇಲಿನ ರೆಪ್ಪೆಯು ಜಾರಿರುವ ತೊಂದರೆಗೆ ವೈದ್ಯಕೀಯ ಭಾಷೆಯಲ್ಲಿ "ಟೋಸಿಸ್" ಎಂದು ಕರೆಯುತ್ತೇವೆ. ಈ ತೊಂದರೆಯಿಂದ ಕಣ್ಣು ಚಿಕ್ಕದಾಗಿ ಕಾಣುತ್ತದೆ. ಇದರಿಂದ ಕಣ್ಣನ್ನು ತೆಗೆಯಲು ಕಷ್ಟ ಆಗುತ್ತದೆ. "ಟೋಸಿಸ್" ಒಂದು ಕಣ್ಣು ಅಥವಾ ಎರಡು ಕಣ್ಣುಗಳಲ್ಲೂ ಕಾಣಬಹುದು. ಇದು ಮಕ್ಕಳಲ್ಲಿ ಹಾಗೂ ವಯಸ್ಕರಲ್ಲಿ ಕಂಡುಬರಬಹುದು. ಇದರಿಂದ ಕಣ್ರೆಪ್ಪೆ ಸ್ವಲ್ಪ ಕುಸಿಯಬಹುದು ಅಥವಾ ಸಂಪೂರ್ಣವಾಗಿ ಪಾಪೆಯನ್ನು ಮುಚ್ಚಬಹುದು ಹಾಗೂ ದೃಷ್ಟಿಗೆ ಅಡ್ಡಿಯಾಗಬಹುದು.

## ಟೋಸಿಸ್ ಬರಲು ಕಾರಣಗಳೇನು?

ಚಿಕ್ಕಮಕ್ಕಳಲ್ಲಿ ಹುಟ್ಟಿದಾಗಿನಿಂದಲೂ ಕಣ್ಣಿನ ರೆಪ್ಪೆಯನ್ನು ಮೇಲಕ್ಕೆ ಎತ್ತುವ ಸ್ನಾಯುಗಳ ದುರ್ಬಲ ಬೆಳವಣಿಗೆಯಿಂದಾಗಿ ಟೋಸಿಸ್ ಕಾಣುತ್ತದೆ. ದೊಡ್ಡವರಿಗೆ ಟೋಸಿಸ್ ಬರಲು ಹಲವು ಕಾರಣಗಳಿವೆ. ನರದ ತೊಂದರೆಗಳಿಂದ, ಕಣ್ಣಿಗೆ ಪೆಟ್ಟಾಗುವುದರಿಂದ, ಗಾಯಗಳಾಗಿರುವುದರಿಂದ, ದೀರ್ಘಕಾಲ ಕಾಂಟ್ಯಾಕ್ಟ್ ಲೆನ್ಸ್‌ಗಳನ್ನು ಬಳಸುವುದರಿಂದ ಬರುತ್ತದೆ. ಮತ್ತೆ ಕೆಲವರಿಗೆ ಪೊರೆಯ ಶಸ್ತ್ರಚಿಕಿತ್ಸೆಯ ನಂತರವೂ ಸಹ ಟೋಸಿಸ್ ಬರುತ್ತದೆ.

## ಟೋಸಿಸ್ ಗುಣಲಕ್ಷಣಗಳೇನು?

ಈ ದೋಷ ಇರುವವರಿಗೆ ಕಣ್ಣುಗಳನ್ನು ತೆರೆಯಲು ಕಷ್ಟವಾಗುತ್ತದೆ. ಓದುವಾಗ ಕಣ್ಣುಗಳಿಗೆ ತುಂಬಾ ಆಯಾಸವಾಗುತ್ತದೆ. ಮತ್ತೆ ಕೆಲವು ಕ್ಲಿಷ್ಟಕರ ಸಂದರ್ಭಗಳಲ್ಲಿ ತಲೆಯನ್ನು ಹಿಂದಕ್ಕೆ ಬಾಗಿಸಿಕೊಂಡು ಅಥವಾ ಕಣ್ಣುರೆಪ್ಪೆಗಳನ್ನು ಬೆರಳುಗಳಿಂದ ಮೇಲಕ್ಕೆ ಎತ್ತಿ ನೋಡಬೇಕಾಗುತ್ತದೆ.

## ನರರೋಗ ತಜ್ಞರನ್ನು ನಾವು ಸಂಪರ್ಕಿಸುವ ಅಗತ್ಯವಿದೆಯೇ?

ಕೆಲವರಿಗೆ ಟೋಸಿಸ್ ನರದ ತೊಂದರೆಯಿಂದ ಬಂದಿರುತ್ತದೆ. ಅದನ್ನು ಆಕ್ಯುಲೋಪ್ಲಾಸ್ಟಿ ತಜ್ಞರು ತಪಾಸಣೆಯ ಮೂಲಕ ಕಂಡು ಹಿಡಿದು ನರರೋಗ ತಜ್ಞರನ್ನು ಭೇಟಿ ಮಾಡಲು ಸಲಹೆ ನೀಡುತ್ತಾರೆ.

## ಟೋಸಿಸ್ ಅನ್ನು ಸರಿಪಡಿಸುವುದು ಎಷ್ಟು ಮುಖ್ಯ?

ವಯಸ್ಕರರಲ್ಲಿ ಟೋಸಿಸ್‌ನಿಂದಾಗಿ ನೋಡುವುದಕ್ಕೆ ಕಷ್ಟ ಮತ್ತು ಆಗಾಗ ಕಣ್ಣುರೆಪ್ಪೆಗಳನ್ನು ಬೆರಳಿನಿಂದ ಮೇಲಕ್ಕೆ ಎತ್ತಿ ನೋಡುವುದನ್ನು ತಪ್ಪಿಸಲು, ಕಣ್ಣಿನ ಆಯಾಸ–ದಣಿವನ್ನು ತಪ್ಪಿಸಲು ಮತ್ತು ಉತ್ತಮ ದೃಷ್ಟಿಗಾಗಿ ಟೋಸಿಸ್ ಚಿಕಿತ್ಸೆಯನ್ನು ಮಾಡಿಸಿಕೊಳ್ಳುವುದು ಅಗತ್ಯವಾಗಿದೆ. ಮಕ್ಕಳಲ್ಲಿ ಟೋಸಿಸ್‌ನಿಂದ ದೃಷ್ಟಿ ಬೆಳವಣಿಗೆ ಕುಂಠಿತವಾಗುತ್ತದೆ. ಹಾಗೂ ಮಂದದೃಷ್ಟಿ ಅಥವಾ ಸೋಮಾರಿ ಕಣ್ಣು [ಅಂಬ್ಲಿಯೋಪಿಯಾ] ಸಮಸ್ಯೆಯು ಉದ್ಭವಿಸಬಹುದು. ಹಾಗಾಗಿ ಈ ದೋಷಗಳನ್ನು ಚಿಕ್ಕ ವಯಸ್ಸಿನಲ್ಲಿಯೇ ಸರಿಪಡಿಸಬೇಕು ಮತ್ತು ಈ ಚಿಕಿತ್ಸೆಯಿಂದ ಮಕ್ಕಳಿಗೆ ಸೂಕ್ತ ಕನ್ನಡಕ ಮತ್ತು ವ್ಯಾಯಾಮಗಳನ್ನು ಹೇಳಿಕೊಟ್ಟು ಮುಂದೆ ಬರಬಹುದಾದಂತಹ ಸಮಸ್ಯೆಗಳಿಂದ ದೂರವಿರಬಹುದು. ರೋಗಿಯು ವಯಸ್ಸಾದ ನಂತರ, ದೃಷ್ಟಿ ತಿದ್ದುಪಡಿಯು ಸಾಧ್ಯವಾಗುವುದಿಲ್ಲ. ಟೋಸಿಸ್ ಹೊಂದಿರುವ ಮಗುವಿನಲ್ಲಿ ದೃಷ್ಟಿಯ ನಿಖರವಾದ ಮೌಲ್ಯಮಾಪನವನ್ನು ಮಾಡುವುದು ಅತ್ಯಂತ ಮುಖ್ಯವಾಗಿದೆ.

## ಟೋಸಿಸ್‌ನನ್ನು ಸರಿಪಡಿಸುವ ವಿಧಾನಗಳು ಯಾವುವು?

ಆಕ್ಯುಲೋಪ್ಲಾಸ್ಟಿ ತಜ್ಞರು ಕಣ್ಣನ್ನು ಅಳತೆ ಮಾಡಿ ಸ್ವಾಭಾವಿಕ ಸ್ನಾಯುಗಳ ಬಲವನ್ನು ಗುರುತಿಸುತ್ತಾರೆ. ಸ್ವಾಭಾವಿಕ ಸ್ನಾಯುಗಳು ಬಲಿಷ್ಟವಾಗಿದ್ದರೆ ಅವುಗಳನ್ನು ಹೊಲಿಗೆ ಹಾಕುವ ಮೂಲಕ ಸರಿಪಡಿಸುತ್ತಾರೆ.



ಶಸ್ತ್ರಚಿಕಿತ್ಸೆಗೆ ಮೊದಲು ಶಸ್ತ್ರಚಿಕಿತ್ಸೆಯ ನಂತರ

ರೆಪ್ಪೆಯ ಸ್ವಾಭಾವಿಕ ಸ್ನಾಯುಗಳು ತುಂಬಾ ದುರ್ಬಲವಾಗಿದ್ದರೆ ಹಣೆಯ ಸ್ನಾಯುಗಳನ್ನು ಮತ್ತು ಕಣ್ಣಿನ ರೆಪ್ಪೆಗಳನ್ನು ಜೋಡಿಸಲು ಇಂಪ್ಲಾಂಟ್ [ಬಹು ಸಾಮಾನ್ಯ ಸಿಲಿಕಾನ್] ಇಡಲಾಗುತ್ತದೆ. ಆಗ ರೋಗಿ ಕಣ್ಣು ರೆಪ್ಪೆ ಎತ್ತಲು ಹಣೆಯ ಸ್ನಾಯುವನ್ನು ಬಳಸಬಹುದು. ಸಿಲಿಕೋನ್ ಸ್ಲಿಂಗ್ ಅನ್ನು ಬಳಸಿದಾಗ, ಹೆಚ್ಚಿನ ಸಾಮ್ಯತೆ ಹೊಂದಿರುತ್ತದೆ, ನೈಸರ್ಗಿಕವಾಗಿ  ಕಣ್ಣು ಮಿಟುಕಿಸುವಿಕೆಯನ್ನು ಅನುಮತಿಸುತ್ತದೆ ಮತ್ತು ಅಗತ್ಯವಿದ್ದರೆ ಮರು–ಹೊಂದಾಣಿಕೆ ಮಾಡಬಹುದು.

ಸ್ನಾಯುಗಳು ತುಂಬಾ ದುರ್ಬಲವಿರುವ ನರರೋಗಿಗಳಿಗೆ ಮಾತ್ರೆಗಳ ಮೂಲಕ ಸರಿಪಡಿಸಲಾಗುತ್ತದೆ. ಕೆಲವು ಪ್ರಕರಣಗಳಲ್ಲಿ ಟೋಸಿಸ್ ಸರಿಪಡಿಸಲು ಸುರಕ್ಷಿತವಲ್ಲ ಎನ್ನುವ ವಿಷಯ ತಿಳಿದರೆ ಅಂತಹವರಿಗೆ ಕಣ್ಣು ತೆಗೆಯಲು ನೆರವಾಗುವ ಕ್ರಚ್ ಕನ್ನಡಕಗಳು ಇವೆ ಎಂದು ತಿಳಿಸುತ್ತಾರೆ.



ಶಸ್ತ್ರಚಿಕಿತ್ಸೆಗೆ ಮೊದಲು ಶಸ್ತ್ರಚಿಕಿತ್ಸೆಯ ನಂತರ

## ಟೋಸಿಸ್ ಶಸ್ತ್ರಚಿಕಿತ್ಸೆಯ ಫಲಿತಾಂಶಗಳೇನು?

ಟೋಸಿಸ್ ಶಸ್ತ್ರಚಿಕಿತ್ಸೆಯ ನಂತರ ಅಂತಿಮ ಫಲಿತಾಂಶವು 6 ವಾರಗಳಲ್ಲಿ ಕಂಡುಬರುತ್ತದೆ. ಪ್ರತಿಯೊಬ್ಬರ ದೇಹವು ವಿಭಿನ್ನ ರೀತಿಯಲ್ಲಿ ಚೇತರಿಸಿಕೊಳ್ಳುತ್ತದೆ. ಶಸ್ತ್ರಚಿಕಿತ್ಸೆಯ ಮೂಲಕ 10 ರೋಗಿಗಳಲ್ಲಿ 8 ರೋಗಿಗಳಿಗೆ ಕಣ್ಣಿನ ರೆಪ್ಪೆಗಳು ಸರಿಯಾದ ಸ್ಥಳಕ್ಕೆ ಎತ್ತಿ ಕೂರಿಸಬಹುದು. ಇನ್ನಿಬ್ಬರಲ್ಲಿ ಒಬ್ಬರಿಗೆ ಕೆಳಗೆ ಮತ್ತು ಮತ್ತೊಬ್ಬರಿಗೆ ಮೇಲೆ ಇರುತ್ತದೆ. ರೋಗಿಗಳು ನೇರವಾಗಿ ನೋಡಿದಾಗ ರೆಪ್ಪೆ ಸಮವಾಗಿರುತ್ತದೆ. ಮೇಲೆ ಮತ್ತು ಕೆಳಗೆ ನೋಡಿದಾಗ ವ್ಯತ್ಯಾಸ ಕಂಡುಬರುತ್ತದೆ. ಶಸ್ತ್ರಚಿಕಿತ್ಸೆ ನಂತರ ರೋಗಿಯು ಮಲಗಿದ್ದಾಗ ಕಣ್ಣುಗುಡ್ಡೆ ಸ್ವಲ್ಪ ಕಾಣಿಸುತ್ತದೆ.

## ಟೋಸಿಸ್ ಶಸ್ತ್ರಚಿಕಿತ್ಸೆಯ ನಂತರ ಕಲೆಗಳು ಉಳಿದುಕೊಳ್ಳುತ್ತದೆಯೇ?

ಈ ಶಸ್ತ್ರಚಿಕಿತ್ಸೆಯಲ್ಲಿ ಸ್ನಾಯುಗಳನ್ನು ಬಲಗೊಳಿಸಲು ರೆಪ್ಪೆಯಲ್ಲಿ ಸೂಕ್ಷ್ಮದಾರವನ್ನು ಇರಿಸಲಾಗುತ್ತದೆ, ಇದು ಕಣ್ಣಿಗೆ ಕಾಣುವುದಿಲ್ಲ. ಕೆಲವರಲ್ಲಿ ಒಂದು ಸಣ್ಣ ಕಲೆ ಉಳಿಯಬಹುದು. ಹಾಗೇ ಸ್ಲಿಂಗ್ ಸರ್ಜರಿ [ತೂಗುದಾರ ಶಸ್ತ್ರಚಿಕಿತ್ಸೆ] ಯಿಂದ ಸ್ನಾಯುವಿಗೆ ಮೂರು ಕಡೆ ಹೊಲಿಗೆ ಹಾಕಿರುತ್ತಾರೆ. ಈ ಶಸ್ತ್ರಚಿಕಿತ್ಸೆಯ ನಂತರ ಅಂತಹ ಎದ್ದುಕಾಣುವ ಕಲೆಗಳು ಕಂಡುಬರುವುದಿಲ್ಲ.